

ಮಾಧವಿಲತಾರನ್ನ ಇಟ್ಕೋಳ್ಳೋ ಅಗತ್ಯವೇನು? ಒಂಥರಾ ಮನೆಯವರಾದ್ರೂ ಅವರಿಗೆ ಕೆಲಸ ಬಿಟ್ಟು ಬೇರೇನಿದೆ ಮಾಡೋಕೆ? ಜೊತೆಗೆ ಜಯಾಳಿಗೆ ಈ ತರ ದೊಡ್ಡವರೊಬ್ಬರು ಮನೆಯಲ್ಲೀರೋದು ಇಷ್ಟವಿಲ್ಲ. ಏಕಾಂತವೇ ಸಿಗೋದಿಲ್ಲ, ಗಂಡನ ಜೊತೆ ಒಬ್ಬಳೇ ಇರೋಕೆ ಇಷ್ಟ ಅವಳಿಗೆ. ಆದ್ದರಿಂದ ಸುದೀಪ್ತ ಐದು ದಿನ ರಜೆ ತಗೊಂಡು ಮಾಧವಿಲತಾರನ್ನ ಕರೆದುಕೊಂಡು ಹೋಗಿ ಅದೇ ಕೇದಾರನಾಥ್ ಘಾಟ್ ಮಂದಿರಕ್ಕೆ ಬಿಟ್ಟು ಬಂದ. ಡಂಡಂ ಪಾರ್ಕಿನ ಈ ಮನೆಗೆ ಬಂದ ಎರಡು ವರ್ಷದ ನಂತರ ಜಯಾ ಗರ್ಭವತಿಯಾದಳು. ಈಗ ಸಮಸ್ಯೆ ಎದುರಾಯಿತು. ಅವಳು ಮಗು ಮತ್ತು ಆಫೀಸ್ ಎರಡನ್ನು ಹೇಗೆ ನೋಡಿಕೊಳ್ತಾಳೆ? ಮಗೂನ ಬೆಳೆಸೋದು ಅಂದ್ರೆ ಬಾಯಲ್ಲಿ ಮಾತಾಡಿದಷ್ಟು ಸುಲಭವೇ! ಸಾನಪಾನ ತಿಂಡಿತೀರ್ಥ, ಡಾಕ್ಟರ್ ಹತ್ರ ಹೋಗೋದು ಎಷ್ಟೊಂದು ಜವಾಬ್ದಾರಿ! ಅನೇಕ ಬಾರಿ ಯೋಚಿಸಿ, ಜಯಾ ಮಾಧವಿಲತಾರನ್ನು ಕರೆದುಕೊಂಡು ಬರಲು ಹೇಳಿದಳು. ಆಗ ಸುದೀಪ್ತ ಮತ್ತೆ ರಜೆ ತಗೊಂಡು ಕಾಶಿಗೆ ಹೋಗಿ ಮಾಧವಿಲತಾರನ್ನ ಕರೆದು ತಂದ.ಎಂಟು ವರ್ಷದ ಹಿಂದೆ ಅದೇ ಮೊದಲ ಬಾರಿ ಮಾಧವಿಲತಾನ ನೋಡಿದ್ದಳು ರಿಯಾ.

ಜಯಾಗೆ ಒಬ್ಬಳು ಮಗಳು ಹುಟ್ಟಿದಳು, ಚೈತಾಲಿ. ಆ ಮಗು ಜೊತೆ ಮಾಧವಿಲತಾಗೆ ಮಮತೆ ಬೆಳೆಯಲು ಶುರುವಾಯ್ತು. ಈ ನಡುವೆ ರಿಯಾಗೂ